ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ

Karnataka State Road Transport Corporation

ADMINISTRASION DEPARTMENT (ಆಡಳಿತ ಇಲಾಖೆ)

Recruitment Section (ನೇಮಕ ಶಾಖೆ)

ಸಂಖ್ಯೆ:ಕರಾಸಾ/ಕೇಕ/ನೇಮಕ/ಸಿ-2/ 58 /18-19 ದಿನಾಂಕ: 16 -04-2018.

**ಪತ್ರಿಕಾ ಪ್ರಕಟಣೆ**

ವಿಷಯ: “ಚಾಲಕ-ಕಂ-ನಿರ್ವಾಹಕ ಹುದ್ದೆಯ ವೃತ್ತಿ ಪರೀಕ್ಷೆಗೆ ಹಾಜರಾಗಲು
ಅಂತಿಮ ಅವಕಾಶ ನೀಡುತ್ತಿರುವ ಬಗ್ಗೆ”.

ಜಾಹೀರಾತು ಸಂ.1/2015, ದಿನಾಂಕ:12-2-2015 ರನ್ವಯ ಮಂಗಳೂರು, ಚಾಮರಾಜನಗರ ಮತ್ತು ಪುತ್ತೂರು ವಿಭಾಗಗಳಿಗೆ ಅರ್ಜಿ ಸಲ್ಲಿಸಿರುವ ಚಾಲಕ-ಕಂ-ನಿರ್ವಾಹಕ ಅಭ್ಯರ್ಥಿಗಳು ಸ್ವಯಂ ವೇಳಾ ಪಟ್ಟಿಯನುಸಾರ ಸಂಸ್ಥೆಯ ವೆಬ್-ಸೈಟ್ ಮುಖಾಂತರ ಕರೆ ಪತ್ರಗಳನ್ನು ಡೌನ್-ಲೋಡ್ ಮಾಡಿಕೊಂಡು ಕರೆ ಪತ್ರದಲ್ಲಿ ನಮೂದಾಗಿರುವ ದಿನಾಂಕದಲ್ಲಿ ವೃತ್ತಿ ಪರೀಕ್ಷೆಗೆ ಹಾಜರಾಗಲು ಅವಕಾಶ ನೀಡಲಾಗಿತ್ತು. ಅದರಲ್ಲಿ ಕೆಲವು ಅಭ್ಯರ್ಥಿಗಳು ಕರೆಪತ್ರ ಡೌನ್-ಲೋಡ್ ಮಾಡಿಕೊಂಡು ನಿಗಧಿತ ದಿನಾಂಕದಲ್ಲಿ ವೃತ್ತಿ ಪರೀಕ್ಷೆಗೆ ಹಾಜರಾಗದೇ ಗೈರುಹಾಜರಾಗಿರುತ್ತಾರೆ ಹಾಗೂ ಕೆಲವು ಅಭ್ಯರ್ಥಿಗಳು ಇದುವರೆವಿಗೂ ಕರೆ ಪತ್ರಗಳನ್ನು ಡೌನ್-ಲೋಡ್ ಮಾಡಿಕೊಂಡಿರುವುದಿಲ್ಲ. ಆದುದರಿಂದ ವೃತ್ತಿ ಪರೀಕ್ಷೆಗೆ ಗೈರುಹಾಜರಾಗಿರುವ ಅಭ್ಯರ್ಥಿಗಳು ಸ್ವಯಂ ವೇಳಾಪಟ್ಟಿಯನುಸಾರ ಮತ್ತೊಮ್ಮೆ ಕರೆಪತ್ರಗಳನ್ನು ದಿನಾಂಕ:23-4-2018 ರೊಳಗೆ ಡೌನ್-ಲೋಡ್ ಮಾಡಿಕೊಂಡು ಕರೆಪತ್ರದಲ್ಲಿ ನಮೂದಾಗುವ ದಿನಾಂಕಕ್ಕೆ ತಪ್ಪದೆ ವೃತ್ತಿ ಪರೀಕ್ಷೆಗೆ ಹಾಜರಾಗಿ ಅವಕಾಶ ಸದುಪಯೋಗ ಮಾಡಿಕೊಳ್ಳುವುದು.

ಇದುವರೆಗೂ ಕರೆಪತ್ರ ಡೌನ್-ಲೋಡ್ ಮಾಡಿಕೊಳ್ಳದೆ ಇರುವ ಅಭ್ಯರ್ಥಿಗಳಿಗೂ ಸಹ ಅಂತಿಮವಾಗಿ ದಿನಾಂಕ: 23-4-2018 ರೊಳಗೆ ನಿಗಮದ ವೆಬ್-ಸೈಟ್ **www.ksrtcjobs.com** ನಲ್ಲಿ ಮುದ್ರಿಸಿಕೊಳ್ಳಲು ಅಂತಿಮ ಅವಕಾಶ ನೀಡಲಾಗಿದೆ. ತದನಂತರ ಈ ಕುರಿತು ಬರುವ ಯಾವುದೇ ಕೋರಿಕೆಗಳನ್ನು ಪರಿಗಣಿಸಲು ಅವಕಾಶವಿರುವುದಿಲ್ಲ.

ಸಹಿ /-

ನಿರ್ದೇಶಕರು (ಸಿ & ಪ)